

# ನಡೆದು ನೋಡಿ ಬ್ರುಸೆಲ್ಸ್

ಬೆಲ್ಜಿಯಂನ ರಾಜಧಾನಿ ಬ್ರುಸೆಲ್ಸ್ ವಿಶ್ವದ ಅತ್ಯಂತ ಸುಂದರ ನಗರಗಳಲ್ಲೊಂದು. ವಿಶ್ವಪ್ರಸಿದ್ಧ ಕ್ಲಬ್ಬುಗಳು ಹಾಗೂ ಬಾರ್‌ಗಳಿಂದ ಕಿಕ್ಕಿರಿದಿರುವ ಈ ನಗರ, ಚಾಕೊಲೇಟ್‌ಗಳಿಂದಾಗಿ ಕೂಡ ಲೋಕಪ್ರಿಯ. ನಡೆದೇ ನೋಡಬಹುದಾದ ಬ್ರುಸೆಲ್ಸ್ ಸೌಂದರ್ಯ ಪ್ರವಾಸಿಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಷ್ಟು ಅನುಪಮವಾದುದು.

■ ಕೆ.ಪಿ. ಸತ್ಯನಾರಾಯಣ

ಬೆಲ್ಜಿಯಂನ ರಾಜಧಾನಿ ಬ್ರುಸೆಲ್ಸ್ ಮಧ್ಯಕಾಲೀನ ಯುಗದ ಆಕರ್ಷಕ ಕಟ್ಟಡಗಳಿಂದ, ಪ್ರತಿದಿನ ಜೀವದಳೆಯುವ ಹೂಗಳ ಮಾರುಕಟ್ಟೆಯಿಂದ ಪ್ರಸಿದ್ಧ. ವಾಸ್ತುಶಿಲ್ಪದ ಅಧ್ಯಯನ ಮಾಡುವವರು ಮತ್ತು ಕಲಾಪ್ರೇಮಿಗಳಿಗೆ ವಿಕ್ಟರ್ ಹೋರ್ಟಾ ಅವರ ವಾಸ್ತುಶಾಸ್ತ್ರದ ಪ್ರದರ್ಶನ ಗ್ಯಾಲರಿ ಈ ನಗರದಲ್ಲಿದೆ. ಪ್ರತಿಷ್ಠಿತ ಕ್ಲಬ್ಬುಗಳು, ಬಾರ್‌ಗಳು, ರೆಸ್ಟೋರಾಂಟ್‌ಗಳು ಅಲ್ಲಿವೆ. ಸಿಹಿ ತಿನಿಸುಗಳಿಗೂ ಬ್ರುಸೆಲ್ಸ್ ಪ್ರಸಿದ್ಧ. ಬೆಲ್ಜಿಯನ್ ಚಾಕೊಲೇಟ್‌ಗಳಂತೂ ವಿಶ್ವ ಪ್ರಸಿದ್ಧ.

ಬೆಲ್ಜಿಯಂನ ಉತ್ತರ ಮಧ್ಯ ಭಾಗದಲ್ಲಿರುವ ಬ್ರುಸೆಲ್ಸ್ ನಗರ ಸಮುದ್ರಮಟ್ಟದಿಂದ ಸರಾಸರಿ 57 ಮೀಟರ್ ಎತ್ತರದಲ್ಲಿದೆ. ಬೇಸಿಗೆಯಲ್ಲಿ ವಿಪರೀತ ಸೆಕೆ, ಚಳಿಗಾಲದಲ್ಲಿ ತೀವ್ರ ಚಳಿ, ವಾರ್ಷಿಕ 200 ದಿನಗಳು ಮಳೆ, ಕನಿಷ್ಠ ಒಂದು ತಿಂಗಳ ಕಾಲ ಹಿಮವೃಷ್ಟಿ, ಇದು ಇಲ್ಲಿನ ವಿಶಿಷ್ಟ ಹವಾಮಾನ.

ಬೆಲ್ಜಿಯಂ ದೇಶದ ಅತಿದೊಡ್ಡ ಪುರಸಭೆಯಾಗಿರುವ ಬ್ರುಸೆಲ್ಸ್, 12 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು ದೇಶದ ಅತ್ಯಂತ ಜನನಿಬಿಡ ಪ್ರದೇಶವಾಗಿದೆ. ಶತಮಾನಗಳಿಂದ ಡಚ್ ಮಾತನಾಡುತ್ತಿದ್ದ ಅಲ್ಲಿನ ಜನರು, 19ನೇ ಶತಮಾನದಿಂದೀಚೆಗೆ ಫ್ರೆಂಚ್ ಮಾತನಾಡುತ್ತಾರೆ.

ಸೀನ್ ನದಿ ದಡದ ಒಂದು ಸಣ್ಣ ಹಳ್ಳಿಯಾಗಿದ್ದ ಬ್ರುಸೆಲ್ಸ್ ಇಂದು ಯುರೋಪಿನ ಬಹು ಮುಖ್ಯ ನಗರವಾಗಿ ಬೆಳೆದಿದೆ. ಯುರೋಪಿಯನ್